ಜೆಎಸ್ಎಸ್ ಮಹಾವಿದ್ಯಾಪೀಠ

# ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್

**ಜೆಎಸ್ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ಮೈಸೂರು 570006**

## ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ
ಮತ್ತು
## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ
ಅವರ ಆಶೀರ್ವಾದಗಳೊಂದಿಗೆ

ಮುಖ್ಯ ಅತಿಥಿಗಳು
**ಡಾ. ಎನ್. ಮುತ್ತುಕುಮಾರ್**
ಅಧ್ಯಕ್ಷರು, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್, ಕರ್ನಾಟಕ ಮತ್ತು
ಪೂರ್ಣಕಾಲಿಕ ನಿರ್ದೇಶಕರು, ಆಟೋಮೋಟಿವ್ ಆಕ್ಸೆಲ್ ಲಿ., ಮೈಸೂರು

ಅತಿಥಿಗಳು ಹಾಗೂ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಉಪನ್ಯಾಸಕರು
**ಡಾ. ಜ್ಯೋತಿ ಶಂಕರ್**
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು

ಕಾಲೇಜಿನ ಹಿರಿಯ ವಿದ್ಯಾರ್ಥಿನಿಯಿಂದ "ಉಜ್ವಲ" ವಾರ್ಷಿಕ ಸಂಚಿಕೆ ಬಿಡುಗಡೆ
**ಶ್ರೀಮತಿ ಎಂ. ಕವಿತಾನಂದ**
ಆಡಳಿತಾತ್ಮಕ ಕಾರ್ಯನಿರ್ವಾಹಕಿ, ಐಐಎಸ್‌ಸಿ, ಬೆಂಗಳೂರು

ಅಧ್ಯಕ್ಷತೆ
**ಶ್ರೀ ಎನ್. ಶೇಖರ್**
ಪ್ರಾಂಶುಪಾಲರು, ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು

**15 ಮಾರ್ಚ್ 2019 * ಶುಕ್ರವಾರ * ಸಂಜೆ 4.30**

**ಸ್ಥಳ: ಸಂಸ್ಥೆಯ ಆವರಣ**

ತಮಗೆ ಆದರದ ಸ್ವಾಗತ

ಪ್ರಾಂಶುಪಾಲರು, ಸಿಬ್ಬಂದಿವರ್ಗ
ಹಾಗೂ ವಿದ್ಯಾರ್ಥಿನಿಯರು

## ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್

ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ 1980ರಲ್ಲಿ ಸ್ಥಾಪಿತವಾಗಿದ್ದು ಶಿಕ್ಷಣಕ್ಕೆ ಪೂರಕವಾದ ತರಬೇತಿ ನೀಡುವ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣಸಂಸ್ಥೆಗಳ ಸಮುಚ್ಚಯ ದಲ್ಲಿ, 100 ಎಕರೆಗೂ ಮೀರಿದ ಆವರಣದಲ್ಲಿ, ಯಶಸ್ವಿಯಾಗಿ ಕಾರ್ಯ ನಿರ್ವಹಿಸು ತ್ತಿದೆ. ರಾಜ್ಯ ಸರ್ಕಾರದಿಂದ ಮಾನ್ಯತೆ ಹೊಂದಿರುವ ಈ ಸಂಸ್ಥೆಯು ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅದೀನದಲ್ಲಿ ಕೆಲಸ ಮಾಡುತ್ತಿದೆ. ಪ್ರಸ್ತುತ ಎನ್‌ಬಿಎ ಅಕ್ರೆಡಿಟೇಷನ್ ಗೌರವಕ್ಕೂ ಪಾತ್ರವಾಗಿರುವ ಸಂಸ್ಥೆಯು ಮಹಿಳಾ ಶಿಕ್ಷಣ ಹಾಗೂ ಔನ್ನತ್ಯದ ಕಡೆಗೆ ಜಾಗತಿಕ ಮಟ್ಟದಲ್ಲಿ ಶ್ರಮಿಸುತ್ತಿದೆ.

ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಪ್ರಾರಂಭಿಕ ಹಂತದಲ್ಲಿ ವಿದ್ಯಾರ್ಥಿನಿಯ ರಿಗೆ ಕಮರ್ಷಿಯಲ್ ಪ್ರಾಕ್ಟೀಸ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗಗಳಲ್ಲಿ ಡಿಪ್ಲೊಮ ಶಿಕ್ಷಣ ನೀಡಲು ಪ್ರಾರಂಭವಾಗಿದ್ದು, ಇಂದು ಉತ್ತಮ ಮಟ್ಟದಲ್ಲಿ ಪ್ರಗತಿ ಹೊಂದಿ ಎಂಟು ವಿಭಾಗಗಳಲ್ಲಿ ಶಿಕ್ಷಣ ತರಬೇತಿ ನೀಡುತ್ತಿದೆ. ಉನ್ನತ ಮಟ್ಟದ ಸೌಲಭ್ಯಗಳಾದ ಸುಸಜ್ಜಿತ ಕಟ್ಟಡ, ಪ್ರಯೋಗಾಲಯಗಳು, ಗ್ರಂಥಾಲಯಗಳು, ಕರ್ತವ್ಯನಿಷ್ಠರಾದ ಬೋಧಕ–ಬೋಧಕೇತರ ವರ್ಗ ಮತ್ತು ಆಧುನಿಕ ಅವಶ್ಯಕತೆಗಳಿಗೆ ಪೂರಕವಾದ ಶಿಕ್ಷಣ ನೀತಿಯನ್ನೊಳಗೊಂಡು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಸರಾಸರಿ 900 ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಶಿಕ್ಷಣ ನೀಡುವ ಕೈಂಕರ್ಯವನ್ನು ಕೈಗೊಂಡಿದೆ.

ಈ ಸಂಸ್ಥೆಯು ಡಿಪ್ಲೊಮ ಶಿಕ್ಷಣ ತರಬೇತಿಯನ್ನು ನೀಡುವುದರ ಜೊತೆಗೆ, ಭಾರತ ಸರ್ಕಾರ, ವಿಶ್ವ ಬ್ಯಾಂಕ್. ರಾಜ್ಯ ಸರ್ಕಾರ, ಕಮ್ಯೂನಿಟಿ ಡೆವಲಪ್‌ಮೆಂಟ್ ಯೋಜನೆಗಳ ಅನುದಾನವನ್ನು ಪಡೆದು, ಔದ್ಯೋಗಿಕ ಕ್ಷೇತ್ರಗಳಲ್ಲಿ ಸಾಂಪ್ರದಾಯಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುತ್ತಿದೆ.

ಸಂಸ್ಥೆಯು ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅನುಮೋದನೆ ಪಡೆದಿದ್ದು ಒಟ್ಟು 1170 ವಿದ್ಯಾರ್ಥಿನಿಯರನ್ನು ಒಳಗೊಂಡಿದೆ. ಇಲ್ಲಿ ಶಿಕ್ಷಣ ಪಡೆದ ನೂರಾರು ವಿದ್ಯಾರ್ಥಿನಿಯರು ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವಾರು ಸಂಸ್ಥೆ ಗಳು, ಬಹುರಾಷ್ಟ್ರೀಯ ಸಂಸ್ಥೆಗಳು, ಖಾಸಗಿ ವಲಯಗಳಲ್ಲಿ ಉದ್ಯೋಗಾವಕಾಶ ವನ್ನು ಪಡೆದುಕೊಂಡಿದ್ದಾರೆ. ಹಲವು ವಿದ್ಯಾರ್ಥಿನಿಯರು ಉನ್ನತ ಶಿಕ್ಷಣವನ್ನು ಪೂರೈಸಿ ಇನ್ನೂ ಉತ್ಕೃಷ್ಟ ಮಟ್ಟದ ಹುದ್ದೆಗಳನ್ನು ಪ್ರಧಾನ ಮಾಡುವಂಥ ಸ್ವಯಂ ಉದ್ಯೋಗಿಗಳಾಗಿದ್ದು, ಸಂಸ್ಥೆಯ ಕೀರ್ತಿ ಗೌರವಗಳನ್ನು ಎತ್ತಿ ಹಿಡಿದಿದ್ದಾರೆ.

* * * * *